ಸತಬರಾಜಂ ನಿಲ್ಲಿಸಲಾಗುತ್ತದೆ. ಅಂತಹ ಪ್ರಕರಣಗಳಲ್ಲಿ ಫಲಾನುಭವಿಗಳು ಬಾಕಿ ಹಣವನ್ನು ತಿಂಗಳಿಗೆ ೧೦ ರೂ. ಗಳಿಗೆ ಕಡಿಮೆ ಇಲ್ಲದ ಮಾಹೆಯಾನ ಕಂತುಗಳಲ್ಲಿ ಚಾಲ್ತಿ ಹಣದ ಜೊತೆಗೆ ನೀಡಲಂ ಅವಕಾಶ ಕಲ್ಪಿಸಿಕೊಡಲಾಗಿದೆ.

ಉ) ಬಾಕಿ ಹಣವನ್ನು ಮಾಹೆಯಾನ ಕಂತುಗಳಲ್ಲಿ ಚಾಲ್ತಿ ಹಣದೊಂದಿಗೆ ಪಾವತಿ ಮಾಡುವ ಅವಕಾಶ ಕಲ್ಪಿಸಿಕೊಡಲಾಗಿದೆ.

ವಿದ್ಯುತ್ ಚಾಲಿತ ಮಗ್ಗಗಳ ನೇಕಾರರ ಬೇಡಿಕೆಗಳು

೪೬೭. ಶ್ರೀ ಎ. ಕೃಷ್ಣಪ್ಪ (ವರ್ತೂರು).— ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯ ಸಣ್ಣ ಪ್ರಮಾಣದ ವಿದ್ಯುತ್ ಚಾಲಿತ ಮಗ್ಗಗಳ ನೇಕಾರರ ಹೋರಾಟ ಸಮಿತಿಯವರಿಂದ ಬೇಡಿಕೆಗಳ ಈಡೇರಿಕೆಗಾಗಿ ಸರ್ಕಾರಕ್ಕೆ ಮನವಿ ಪತ್ರವೊಂದು ಬಂದಿದೆಯೇ ?

ಆ) ಹಾಗಿದ್ದಲ್ಲಿ ಅವರ ಬೇಡಿಕೆಗಳಾವುವು ?

ಇ) ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು ?

ಶ್ರೀ ಬಿ. ಎ. ಜೀವಿಜಯ (ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು) —

ಅ) ಬಂದಿದೆ.

ಆ) ಬೇಡಿಕೆಗಳು ಕೆಳಗಿನಂತಿವೆ.

ಅ) ಒಂದರಿಂದ ಒಂಬತ್ತು ಮಗ್ಗಗಳನ್ನು ಹೊಂದಿರುವ ವಿದ್ಯುತ್‌ಚಾಲಿತ ಮಗ್ಗಗಳನ್ನು ಅತಿ ಸಣ್ಣ ಗೃಹ ಕೈಗಾರಿಕಾ (ಟೈನಿ ಸೆಕ್ಟರ್ ಕಾಟೇಜ್ ಇಂಡಸ್ಟ್ರೀಸ್) ಘಟಕಗಳೆಂದು ಪರಿಗಣಿಸುವುದು.

ಆ) ಹಾಲಿ ಒಂದರಿಂದ ಒಂಭತ್ತು ವಿದ್ಯುತ್‌ಚಾಲಿತ ಮಗ್ಗಗಳವರೆಗೆ ಮಾರಾಟ ತೆರಿಗೆ ವಜಾ ಮಾಡುವುದು.

ಇ) ಈ ಮಾರಾಟ ತೆರಿಗೆಯನ್ನು ಶೇಕಡಾ ಒಂದರಂತೆ ರೇಷ್ಮೆ ವಿನಿಮಯ ಕೇಂದ್ರದಲ್ಲಿ ರೇಷ್ಮೆ ಮೇಲೆ ವಿಧಿಸುವುದು.

ಈ) ರಿಜಿಸ್ಟ್ರೇಷನ್‌ನಿಂದ ವಿನಾಯಿತಿಗೊಳಿಸುವುದು.

ಉ) ಕೇಂದ್ರಸರ್ಕಾರದ ನಿರ್ಬಂಧಕಾರಿ ಶಾಸನದಿಂದ ಆಗುತ್ತಿರುವ ತೊಂದರೆಗಳ ದೆಶೆಯಲ್ಲಿಯೂ ಈಗ ನಶಿಸಿ ಹೋಗುತ್ತಿರುವ ರೇಷ್ಮೆ ಉದ್ದಿಮೆ ಉಳಿಯಲು ಸಹಾಯ ಮಾಡುವುದು.

ಇ) ೧) ವಿದ್ಯುತ್‌ಚಾಲಿತ ಮಗ್ಗಗಳ ಉದ್ಯಮಗಳನ್ನು ಸಣ್ಣ ಕೈಗಾರಿಕೆ ಅತಿ ಸಣ್ಣ ಕೈಗಾರಿಕಾ ಘಟಕಗಳೆಂದು ಸ್ಥಳದ ಜನಸಂಖ್ಯೆ ಹಾಗೂ ಯಂತ್ರೋಪಕರಣಗಳ ಬಂಡವಾಳದ ಮೇಲೆ ಪರಿಗಣಿಸಲಾಗುತ್ತಿದೆ.

೨) ಮಾರಾಟ ತೆರಿಗೆ ವಿನಾಯಿತಿ ನೀಡುವ ಬಗ್ಗೆ ಹಾಗೂ ತೆರಿಗೆಯನ್ನು ಶೇಕಡಾ ೧ ರಂತೆ ಇಳಿಸುವ ಬಗ್ಗೆ ಸದ್ಯಕ್ಕೆ ಸರ್ಕಾರದಲ್ಲಿ ಯಾವ ಕಾರ್ಯಕ್ರಮವೂ ಇಲ್ಲ.

ಮೈಸೂರು ಸಕ್ಕರೆ ಕಾರ್ಖಾನೆಯು ನಷ್ಟವನ್ನು ಅನುಭವಿಸುತ್ತಿರುವುದು

೫೮೫. ಶ್ರೀ ಡಿ. ಎ. ಚಿನ್ನಪ್ಪ (ಮಡಿಕೇರಿ).— ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕೆಗಳು ಮತ್ತು ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮಂಡ್ಯದಲ್ಲಿರುವ ಸಕ್ಕರೆ ಕಾರ್ಖಾನೆ ಸತತವಾಗಿ ನಷ್ಟ ಅನುಭವಿಸುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ ?

ಅ) ನಷ್ಟಕ್ಕೆ ಕಾರಣ ಅದಕ್ಷ ಆಡಳಿತವೇ ?

ಇ) ಹಾಗಿದ್ದಲ್ಲಿ ಆಡಳಿತ ವರ್ಗದ ಮೇಲೆ ಯಾವ ಕ್ರಮ ತೆಗೆದುಕೊಳ್ಳಲಾಗಿದೆ ?

ಶ್ರೀ ಜೆ.ಹೆಚ್. ಪಟೇಲ್(ಭಾರಿ ಮತ್ತು ಮಧ್ಯಮ ಕೈಗಾರಿಕೆ ಹಾಗೂ ವಿದ್ಯುತ್ ಮಂತ್ರಿಗಳು).–

ಅ) ಹೌದು. ಸಕ್ಕರೆ ಕಾರ್ಖಾನೆಯ ನಷ್ಟಕ್ಕೆ ಕಾರಣಗಳು :

೧ ಈ ಸಕ್ಕರೆ ಕಾರ್ಖಾನೆಯಲ್ಲಿ ಪರಿವರ್ತನಾ ವೆಚ್ಚವು ರಾಜ್ಯದಲ್ಲಿಯೇ ಅತಿ ಹೆಚ್ಚಿನ ದಾಗಿರುವುದು;

೨ ಕಬ್ಬಿನ ಗಾಣಗಳಿಗೆ ಹೆಚ್ಚಿನ ಪ್ರಮಾಣದಲ್ಲಿ ಸಾಗಾಣಿಕೆಯಾಗುವ ಕಬ್ಬಿನಿಂದಾಗಿ ಕಾರ್ಖಾನೆಯ ಕಬ್ಬು ಅರೆಯುವಿಕೆಯ ಪ್ರಮಾಣ ಕಡಿಮೆಯಾಗಿರುವುದು;

೩ ಯಂತ್ರೋಪಕರಣ ಆಯು ಕ್ಷಿತಪ್ಪುವಿಕೆಯಿಂದಾಗಿ ಇಳುವರಿ ಪ್ರಮಾಣ ಕಡಿಮೆ ಇರುವುದು.

ಇ) ಕಾರ್ಖಾನೆಯು ಹಣಕಾಸಿನ ದುರ್ವ್ಯಹಾರದಿಂದಲೂ ಸಹ ನಷ್ಟ ಅನುಭವಿಸಿದೆ ಎಂದು ಆಪಾದಿಸಲಾಗಿದೆ. ಈ ತರಹದ ನಷ್ಟ ಉಂಟಾಗಿರುವ ಪ್ರಕರಣಗಳ ಬಗ್ಗೆ ವಿಚಾರಣೆ ಮಾಡಲು ಲೋಕಾಯುಕ್ತಕ್ಕೆ ಕುಪನಿಯು ಮನವಿ ಮಾಡಿಕೊಳ್ಳಲಾಗಿದೆ.

ಹೊಸದುರ್ಗ ತಾಲ್ಲೂಕಿಗೆ ಹಾಲಿನ ಡೈರಿ

೭೪೦. ಶ್ರೀ ಜಿ. ರಾಮದಾಸ್ (ಹೊಸದುರ್ಗ).— ಮಾನ್ಯ ಪಶುಸಂಗೋಪನೆ ಮತ್ತು ಪಶು ವೈದ್ಯ ಸೇವೆಗಳ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದ ಎಲ್ಲ ತಾಲ್ಲೂಕುಗಳಲ್ಲಿ ಹೈನು ಕೇಂದ್ರಕ್ಕೆ ಹಾಲು ಖರೀದಿ ಮತ್ತು ಹಾಲು ವಿತರಣೆಗೆ ವ್ಯವಸ್ಥೆ ಮಾಡಲು ಸರ್ಕಾರವು ಆಲೋಚಿಸಿದೆಯೆ ?

ಆ) ಹಾಗಿದ್ದಲ್ಲಿ ಸದರಿ ಸೌಲಭ್ಯಕ್ಕೆ ರಾಜ್ಯದ ಎಷ್ಟು ತಾಲ್ಲೂಕುಗಳು ಒಳಪಟ್ಟಿವೆ ?

ಇ) ಹೊಸದುರ್ಗ ತಾಲ್ಲೂಕನ್ನು ತುಮಕೂರು ಅಥವಾ ಶಿವಮೊಗ್ಗ ಹೈನು ಕೇಂದ್ರದ ವ್ಯಾಪ್ತಿಗೆ ಸೇರಿಸಲು ಸರ್ಕಾರ ಉದ್ದೇಶಿಸಿದೆಯೇ ?

ಶ್ರೀ ಸಿದ್ದರಾಮಯ್ಯ (ಪಶು ಸಂಗೋಪನೆ ಮತ್ತು ಪಶುವೈದ್ಯ ಸೇವೆಗಳ ಸಚಿವರು).—

ಅ) ರಾಜ್ಯದ ಎಲ್ಲಾ ತಾಲ್ಲೂಕುಗಳಲ್ಲಿ ಹಾಲು ಉತ್ಪಾದಕರ ಸಹಕಾರಿ ಸಂಘಗಳನ್ನು ಸ್ಥಾಪಿಸಿ, ಹಾಲನ್ನು ಶೇಖರಿಸಿ, ವಿತರಣೆ ಮಾಡಲು ಯೋಜಿಸಲಾಗಿದೆ,

ಆ) ಈಗ, ೧೪ ತಾಲ್ಲೂಕುಗಳು.

ಇ) ಹೊಸದುರ್ಗ ತಾಲ್ಲೂಕು ಈಗಾಗಲೇ ತುಮಕೂರು ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ, ತುಮಕೂರು ಇದರ ಕಾರ್ಯವ್ಯಾಪ್ತಿಯಲ್ಲಿದೆ.

ಉಪಯೋಗಿಸಲ್ಪಡದೇ ಇರುವಂತಹ ಜಲಪಾತಗಳ ಸಂಖ್ಯೆ

೫೭೬. ಶ್ರೀಮತಿ ಮುಕ್ತರುನ್ನೀಸಾ (ನರಸಿಂಹರಾಜ).— ಮಾನ್ಯ ವಿದ್ಯುತ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಇದುವರೆಗೆ ವಿದ್ಯುತ್ ಉತ್ಪಾದನೆಗೆ ಉಪಯೋಗಿಸಲ್ಪಡದೇ ಇರುವಂತಹ ಜಲಪಾತಗಳ ಸಂಖ್ಯೆ ಎಷ್ಟು ?

ಆ) ಸರ್ಕಾರವು ಈ ಜಲಪಾತಗಳಲ್ಲಿ ವಿದ್ಯುತ್ ಉತ್ಪಾದನೆಗಾಗಿ ಯಾವುದೇ ಹೊಸ ಜಲವಿದ್ಯುತ್ ಯೋಜನೆಗಳನ್ನು ಕೈಗೊಂಡಿದೆಯೇ ?